ದೇಹದಲ್ಲಿ ಕಂಪನ ಶುರುವಾಗಿ ಬಿಗಿಯಾಗಿ ಕಣ್ಮುಚ್ಚಿಕೊಂಡವಳಿಗೆ ಯಾವಾಗಲೋ ನಿದ್ರೆ ಹತ್ತಿತ್ತು.

* * *

ಮರುದಿನ ಅವಳು ಕಣ್ಬಿಟ್ಟಾಗ ಸಾಕಷ್ಟು ಬೆಳಕಾಗಿತ್ತು. ಕಲಾವತಿ ಯಾವಾಗಲೋ ಕೆಳಗಿಳಿದು ಹೋಗಿದ್ದರು. ರಾತ್ರಿಯ ಪ್ರಕರಣವನ್ನು ಮನಸ್ಸು ಮೆಲುಕು ಹಾಕಿತು. ರಾತ್ರಿ ಗಾಳಿ ಭಯಂಕರವಾಗಿ ಸುಂಯ್ಗುಟ್ಟಿ, ಬಾವಲಿಯ ರೆಕ್ಕೆಬಡಿತವನ್ನು ತಾನು ಕೇಳಿದಂತಾಗಿ ಬೆದರಿದ್ದೂ ನೆನಪಾಯಿತು. ಮರೆತಂತಿದ್ದ ಪ್ರಶಾಂತನ ಕೊಲೆಯ ವಿಷಯ ಮತ್ತೆ ತಲೆಯೊಳಗೆ ಸುಳಿದಾಡತೊಡಗಿತು. ತನ್ನ ಕನಸಿನಲ್ಲಿ ಬಂದ ಆ ರಕ್ತಸಿಕ್ತವಾದ ಆಕೃತಿ ಅದೆಷ್ಟು ಭಯಂಕರವಾಗಿತ್ತು.. ತಾನು ಹೋದಲ್ಲೆಲ್ಲಾ ಹಿಂಬಾಲಿಸಿ ಬರುತ್ತಿದ್ದ ಅದರಿಂದ ತಪ್ಪಿಸಿಕೊಳ್ಳುವುದು ಕಷ್ಟವಿತ್ತು. ತಾನು ಭಯದಿಂದ ಚೀರಿ ಕಣ್ಬಿಟ್ಟಾಗ ಮಸುಕು ಬೆಳಕಿನಲ್ಲಿ ಯಾರೋ ನಿಂತಿದ್ದರು. ಅದು ತನ್ನ ತಂದೆಯೆಂದು ತಿಳಿದದ್ದು ನಂತರವೇ. ಆದರೆ ಆ ಕ್ಷಣಕ್ಕೆ ಉಂಟಾದ ತಲ್ಲಣ, ಭಯವನ್ನು ತಾನು ಮರೆಯಲಾದೀತೇ? ಮರೆತಂತಿದ್ದ ತಾಯಿಯ ನೆನಪು ಧುತ್ತೆಂದು ಪ್ರತ್ಯಕ್ಷವಾಗಿ ಮತ್ತಷ್ಟು ಸಂಕಟಕ್ಕೆ ಅವಳನ್ನು ಈಡು ಮಾಡಿತ್ತು.

ಮೇಲೆದ್ದವಳು ಬಿಸಿನೀರಿನಲ್ಲಿ ಮುಖ ತೊಳೆದು ರೂಮಿಗೆ ಹೊಂದಿಕೊಂಡಿದ್ದ ಬಾಲ್ಕನಿಗೆ ಹೋಗಿ ನಿಂತಳು. ಅಲ್ಲಿಂದ ಮಾವು ಬೇವುಗಳಂತಹ ಮರಗಳ ಸೊಬಗನ್ನು ನೋಡಬಹುದಿತ್ತು. ಚಳಿಗಾಲದ ದಿನಗಳಾದ್ದರಿಂದ ಮರಗಳು ಒಂದಿಷ್ಟು ಹಸಿರನ್ನು ಉಳಿಸಿಕೊಂಡು ಬರುವ ಚೈತ್ರಕ್ಕಾಗಿ ಕಾಯುವಂತಿದ್ದವು. ಕಾಡುಮರಗಳಲ್ಲಿ ಬಹಳಷ್ಟು ಹಕ್ಕಿಗಳು ವಾಸ ಮಾಡುವುದರಿಂದ ಅವುಗಳ ಚಿಲಿಪಿಲಿ ಸದ್ದು ಬಂಗಲೆಯ ನಿಶ್ಶಬ್ದವನ್ನು ಸಾಕಷ್ಟು ಹೊಡೆದೋಡಿಸುತ್ತಿದ್ದವು.

ಬಂಗಲೆಗೆ ಹೊಸದಾಗಿ ಬಂದು ಸೇರಿದ್ದ ಜೋಡಿ ಹಕ್ಕಿಗಳತ್ತ ಅವಳ ಗಮನಹರಿಯಿತು. ಪಾರಿವಾಳಗಳಿಗಿಂತ ಗಾತ್ರದಲ್ಲಿ ಸಣ್ಣವು. ದೇಹದ ಮೇಲ್ಭಾಗ ಹಸಿರು ಬಣ್ಣದಿಂದ ಕೂಡಿದ್ದರೆ ಕೆಳಗೆಲ್ಲಾ ಹಳದಿಮಯವಾಗಿತ್ತು. ಉದ್ದ ಕೊಕ್ಕು, ಕಣ್ಣ ಸುತ್ತಲಿಂದ ಆರಂಭಿಸಿ ತಲೆಯ ಹಿಂಭಾಗದವರೆಗೂ ಉದ್ದಕ್ಕೆ ಕಾಡಿಗೆ ದಪ್ಪನಾಗಿ ತೀಡಿದಂತಿದ್ದರೆ ತಲೆಯ ಮೇಲ್ಭಾಗದಲ್ಲಿ ನಡುವೆ ಕಪ್ಪು ಪಟ್ಟೆ, ಆಚೀಚೆ ಹಳದಿ ಪಟ್ಟೆಗಳಿದ್ದವು.

ಅವಳು ಬಂಗಲೆಯ ತೋಟದಲ್ಲಿ ಗುಬ್ಬಚ್ಚಿ, ಪಾರಿವಾಳ, ಗಿಳಿ ಮುಂತಾದ ಪಕ್ಷಿಗಳನ್ನು ಆಗಾಗ ನೋಡುತ್ತಲೇ ಇರುತ್ತಾಳೆ. ಆದರೆ ಇದ್ಯಾವ ಪಕ್ಷಿಗಳು... ಕುತೂಹಲದಿಂದ ಅವುಗಳತ್ತಲೇ ನೋಡತೊಡಗಿದಳು. ಗಿಲಿಗಿಚ್ಚಿಯ ಸದ್ದಿನಂತೆ ಅವುಗಳ ಚಿಲಿಪಿಲಿಯಿತ್ತು. ಮರದ ಟೊಂಗೆಯಲ್ಲಿ ಬಿದ್ದಿದ್ದ ಬೀಜಗಳನ್ನು ಹೆಕ್ಕುವ ಸಂಭ್ರಮದಲ್ಲಿದ್ದವು ಅವುಗಳು. ಸ್ವಲ್ಪ ಆಚೆ ಮರದ ಪೊಟರೆಯೊಂದರಲ್ಲಿ ಅವುಗಳ ಬಿಡಾರವಿರಬೇಕು. ಕಾಳನ್ನು ಹೆಕ್ಕಿ ಆ ಪೊಟರೆಯತ್ತ ಹಾರಿ ಹಿಂದಿರುಗುತ್ತಿದ್ದವು. ಅವುಗಳ ಚಿನ್ನಾಟವನ್ನು ನೋಡುತ್ತಾ ಮೈಮರೆತಳು ಋತು.

ಕಾರ್ತಿಕ ಮಾಸದ ಕುಳಿರ್ಗಾಳಿ ಬೀಸುತ್ತಿದ್ದರೂ ಎಳೆಬಿಸಿಲು ಅದನ್ನು ಹೊಡದೋಡಿಸತೊಡಗಿತ್ತು. ಇನ್ನೂ ಅದೆಷ್ಟು ಹೊತ್ತು ಹಾಗೆಯೇ ನಿಂತಿರುತ್ತಿದ್ದಳೋ, ಕಲಾವತಿ ಮೇಲೇರಿ ಬಂದು ಕರೆದಾಗಲೇ ಎಚ್ಚರ....

'ಗುಡ್ ಮಾರ್ನಿಂಗ್ ಋತು, ಈಗ ಹೇಗಿದ್ದಿ? ನಿನ್ನೆ ನೀನು ಕನಸಿನಲ್ಲಿ ಚೀರಿಕೊಂಡಾಗ ನನಗೆಷ್ಟು ಭಯವಾಗಿತ್ತು ಗೊತ್ತಾ?' ಎಂದರು ಕಲಾವತಿ.

ತನ್ನನ್ನು ತಾಯಿಯಂತೆ ಆದರಿಸುವ ಕಲಾವತಿಯತ್ತ ನೋಡಿದಳು ಋತು. ಅದೇಕೋ ಆಕೆಯನ್ನು ನೋಡಿದರೆ ಕಣ್ಮರೆಯಾದ ತನ್ನ ತಾಯಿಯೇ ಮರಳಿ ಬಂದಂತಹ ಒಂದು ಮಧುರ ಅನುಭೂತಿ....

'ಚಿಕ್ಕಮ್ಮ...' ಎಂದವಳೇ ಆಕೆಯ ಹೆಗಲಿಗೊರಗಿದಳು. ಕಲಾವತಿಯೂ ವಾತ್ಸಲ್ಯದಿಂದ ಅವಳ ಮುಂದಲೆ ಸವರಿದಳು.

'ಬಾ ಋತು, ನಿಂಗೋಸ್ಕರ ಬಿಸಿ ಕಾಫಿ ತಂದಿದ್ದೀನಿ, ಕುಡಿದು ಸುಧಾರಿಸ್ಕೋ..'. ಎಂದವರು ಬಲವಂತವಾಗಿ ಅವಳನ್ನು ರೂಮಿನೊಳಕ್ಕೆ ಕರೆದೊಯ್ದು ಮಂಚದ ಮೇಲೆ ಕೂರಿಸಿ ಕಾಫಿಯ ಬಟ್ಟಲನ್ನು ಕೈಗಿತ್ತರು.

ಅವಳು ಕುಡಿದು ಮುಗಿಸುವವರೆಗೂ ಮಾತನಾಡುತ್ತಲೇ ಇದ್ದರು. ಸದಾಕಾಲ ಮೌನಿಯಾಗಿಯೇ ಇರುವ ಚಂದ್ರಪ್ಪನ ಹೆಂಡತಿ ಸುಂದರಿಯ ಕುರಿತಾಗಿ ಅವರಿಗಿರುವ ಅಸಹನೆ ಇಂದು ನಿನ್ನೆಯದಲ್ಲ. ಮಾತನಾಡದೆ ಧಿಮಾಕು ತೋರಿಸುವ ಅವಳು ಈ ಬಂಗಲೆಯ ಯಜಮಾನಿಯೋ ಅಥವಾ ತಾನೋ ಎಂಬ ಸಂದೇಹ ಆಗಾಗ ಕಲಾವತಿಗೆ ಹುಟ್ಟುವುದಿದೆ. ಈ ದಿನವೂ ಆ ಬಗ್ಗೆಯೇ ಮಾತನಾಡತೊಡಗಿದ್ದರು.

ಹೋಗ್ಲಿ ಬಿಡು ಚಿಕ್ಕಮ್ಮ, ಸದಾ ಮಾತನಾಡುತ್ತಾ ತಲೆನೋವು ಬರಿಸುವ ಕೆಲಸದವರಿಗಿಂತ ಈ ಸುಂದರಿ ನೂರು ಪಾಲುಮೇಲು ಅಲ್ವಾ, ಸುಮ್ನೆ ಇಂಥಾ ವಿಷಯಗಳಿಗೆಲ್ಲಾ ನೀನು ತಲೆಕೆಡಿಸಿಕೊಳ್ಬೇಡ....

'ಅದು ಸರಿ ಬಿಡು ಋತು, ನಾನು ಹೋಗಿ ತಿಂಡಿಗೆ ಸಿದ್ಧ ಮಾಡ್ತೀನಿ, ನೀನು ಸ್ನಾನ ಮಾಡಿಕೊಂಡು ಬಾ.... ಕಲಾವತಿಯೆಂದಾಗ ಆಯ್ತು ಚಿಕ್ಕಮ್ಮ, ನಿನ್ನ ಮಾತು ಮೀರಿ ಈ ಕೋಟೆ ಬಂಗ್ಲೇಲಿ ಬದುಕೋದುಂಟಾ?....ನೀನು ಹೇಳಿದಂತೇ ಮಾಡ್ತೀನಿ....'

ಋತು ಅತಿ ವಿನಯ ತೋರಿ ಕೈ ಮುಗಿದಾಗ ಕಲಾವತಿಗೂ ನಗೆಯುಕ್ಕಿತು. ಬರಿದಾದ ಕಾಫಿಯ ಬಟ್ಟಲನ್ನು ತೆಗೆದುಕೊಂಡು ಅವರು ಕೆಳಗಿಳಿದು ಹೋದರು.

ಋತುವೂ ಚಿಕ್ಕಮ್ಮ ಹೇಳಿದಂತೆ ಸ್ನಾನ ಮಾಡಿಕೊಂಡು ಉದ್ದ ತೋಳಿನ ಕಾಟನ್ ಕುರ್ತಾವೊಂದನ್ನು ಧರಿಸಿಕೊಂಡು ಕೆಳಗಿಳಿದು ಬಂದಳು.

ಈ ದಿನ ದೇಹ ಹಗುರಾಗಿತ್ತು. ನಿನ್ನೆಯ ಬಳಲಿಕೆ ಅಷ್ಟಾಗಿ ಕಂಡುಬರಲಿಲ್ಲ. ಅವಳು ಬರುವ ವೇಳೆಗೆ ಪುರುಷೋತ್ತಮರೂ ಸ್ನಾನ ಪೂಜೆ ಮುಗಿಸಿಕೊಂಡು ದಿನಪತ್ರಿಕೆಯತ್ತ ಕಣ್ಣು ನೆಟ್ಟಿದ್ದರು.

ಆರಾಮಾಗಿ ಕೆಳಗಿಳಿದು ಬಂದ ಮಗಳು ಋತುವನ್ನು ನೋಡಿ ಮುಖದಲ್ಲಿ ಹರುಷವುಕ್ಕಿತು. ಸದ್ಯ ಒಂದೇ ದಿನದಲ್ಲಿ ಗೆಲುವಾದಳಲ್ಲ....

'ಗುಡ್ ಮಾರ್ನಿಂಗ್ ಋತು, ಈಗ ಹೇಗಿದ್ದ ಮರಿ....' ವಾತ್ಸಲ್ಯದಿಂದ ಪ್ರಶ್ನಿಸುತ್ತಲೇ ಅವಳ ಕೈ ಹಿಡಿದುಕೊಂಡು ಪಕ್ಕದಲ್ಲಿ ಕುಳ್ಳಿರಿಸಿಕೊಂಡರು.

'ನೀನು, ಚಿಕ್ಕಮ್ಮ ಇಷ್ಟು ಚೆನ್ನಾಗಿ ನನ್ನನ್ನು ನೋಡಿಕೊಳ್ತಿದ್ರೆ ನಾನು ಚೆನ್ನಾಗೇ ಇರ್ತೀನಿ ಬಿಡು ಪಪ್ಪ....' ಎಂದು ತಂದೆಯನ್ನು ಹೊಗಳಿದಳು

ಅಷ್ಟೊಂದು ಎತ್ತರವಿಲ್ಲದ ಗಿಡ್ಡ ದೇಹ, ಕಪ್ಪಾದ ಗುಂಡಗಿನ ಮುಖ, ಅರೆ ಬಕ್ಕತಲೆ, ಗೋಲಿ ಕಂಗಳು, ನೋಡಿದ ತಕ್ಷಣ ಆಕರ್ಷಿಸುವಂತಹ ಚಹರೆಯಲ್ಲದಿದ್ದರೂ ಅವರೊಂದಿಗೆ ಬೆರೆಯುತ್ತಾ ಬಂದ ಹಾಗೆ ಆಪ್ತರಾಗುವ ಅವರ ಸ್ವಭಾವವೇ ಅವರನ್ನು ವಿಭಿನ್ನವಾಗಿಸಿತ್ತು. ಕೋರ್ಟ್‌ಗೆ ಹೋಗುವಾಗ ಕರಿಯ ಕೋಟನ್ನು ಹಾಕಿಕೊಂಡು ಹೊರಡುವ ಪುರುಷೋತ್ತಮರು ಮನೆಯಲ್ಲಿ ಮಾತ್ರ ಖಾದಿ ಬಟ್ಟೆಯನ್ನಷ್ಟೇ ತೊಡುತ್ತಾರೆ.

'ನಿಮ್ಮ ಕಾಲೇಜಿನಲ್ಲಿ ನಡೆದ ಕೊಲೆಯ ವಿಷಯ ಗೊತ್ತಾಯ್ತು ಋತು, ಅದನ್ನೇ ಮನಸ್ಸಿಗೆ ಹಚ್ಚಿಕೊಂಡು ಕೊರಗ್ಬೇಡ, ಒಮ್ಮೊಮ್ಮೆ ನಮ್ಮ ಕೈ ಮೀರಿ ಕೆಟ್ಟ ವಿಷಯಗಳು ನಡೆದು ಹೋಗ್ಬಿಡುತ್ತೆ, ಧೈರ್ಯವಾಗಿರು....' ಎಂದು ಮಗಳಿಗೆ ಧೈರ್ಯ ಹೇಳಿದರು.

ಅಷ್ಟರಲ್ಲಿ ಕಲಾವತಿ ಇಬ್ಬರಿಗೂ ಉಪಾಹಾರ ತಂದಿತ್ತರು. ತಟ್ಟನೆ ಋತುವಿಗೆ ಭರತನ ನೆನಪಾಯಿತು. ನಿನ್ನೆಯಿಂದ ಅವನ ಮುಖದರ್ಶನವೇ ಇಲ್ಲವಲ್ಲ.

'ಚಿಕ್ಕಮ್ಮ....ಭರತ ಎಲ್ಲಿ?' ಕೇಳಿದಳು.

'ಅವ್ನಿನ್ನು ಎಲ್ಲಿರ್ತಾನೆ, ಒಂದೋ ತನ್ನ ರೂಮಿನಲ್ಲಿರ್ತಾನೆ, ಇಲ್ಲಾ ಬಂಗಲೆಯ ಮುಂದಿರೋ ಕಾರಂಜಿ ತೋಟದಲ್ಲಿರ್ತಾನೆ, ಅದೂ ಬಿಟ್ರೆ ಅಕ್ವೇರಿಯಂನ ಮುಂದೆ ಮೀನುಗಳನ್ನು ನೋಡ್ತಾ ಕುಳಿತು ಬಿಡ್ತಾನೆ, ನೀವಿಬ್ರೂ ತಿಂಡಿ ತಿನ್ನಿ, ನಾನು ನೋಡಿ ಕರೆದುಕೊಂಡು ಬರ್ತೀನಿ....' ಎಂದ ಕಲಾವತಿ ಐದೇ ನಿಮಿಷದೊಳಗೆ ಭರತನೊಂದಿಗೆ ಹಿಂದಿರುಗಿದ್ದರು.

ತಂದೆಯದೇ ಪಡಿಯಚ್ಚು. ಅವನಿಗೆ ತಲೆಯ ತುಂಬಾ ಗುಂಗುರು ಕೂದಲಿರು ವುದು ಬಿಟ್ಟರೆ ತಂದೆ ಮಗನಿಗೆ ಅಂಥ ವ್ಯತ್ಯಾಸವೇನಿಲ್ಲ. ಟೀ ಶರ್ಟ್, ಬರ್ಮುಡಾ ಧರಿಸಿದ್ದ ಅವನು ಪುಟ್ಟ ಹುಡುಗನಂತೆಯೇ ಋತುವಿಗೆ ಕಂಡ.

'ಬಾರೋ ಭರತ, ನಿನ್ನೆಯಿಂದ ನಿನ್ನನ್ನು ನೋಡ್ದೆ ಎಷ್ಟು ಬೇಜಾರಾಗಿತ್ತು ಗೊತ್ತಾ? ಬಾ....ತಿಂಡಿ ತಿನ್ನೋಣ...' ಋತುವಿನ ಮಾತಿಗೆ ಅವನೇನೂ ಪ್ರತಿಕ್ರಿಯಿಸದೆ ತಲೆ ಬಗ್ಗಿಸಿ ತಿಂಡಿ ತಿನ್ನತೊಡಗಿದ್ದ.

(ಸಶೇಷ)